**4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಪಿಸಿಆರ್ ನಂ-5467/16**

ಸಿ.ಡಬ್ಲ್ಯು.1

ಪ್ರ.ವ.ಬೊ. ದಿಃ 17.2.2021

ಸಾಕ್ಷಿದಾರನ ಹೆಸರು : ಮಣಿಕಂದನ್‌ರಾಜಾಲಿಂಗಂ

ತಂದೆಯ ಹೆಸರು : ರಾಜಾಲಿಂಗಂವಯ್ಯಾಪುರಿ

ವಯಸ್ಸು : 34 ವರ್ಷ

ಕೆಲಸ : ಕಂಪನಿ ಸೆಕ್ರೆಟರಿ, ಮೆಸರ್ಸ್ ರಿನಾಕ್ ಇಂಡಿಯಾ ಲಿ.

ವಾಸ : ಮಾಗಡಿರಸ್ತೆ, ಬೆಂಗಳೂರು

**ಫಿರ್ಯಾದಿಯ ಸ್ವಪ್ರಮಾಣಪೂರ್ವಕ ಹೇಳಿಕೆಃ**

1. ನಾನು ಕಂಪನಿ ಸೆಕ್ರೆಟರಿಯಾಗಿ ಮೆಸರ್ಸ್ ರಿನಾಕ್ ಇಂಡಿಯಾ ಲಿ. ದಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ದಿ.2.12.2011 ರಂದು ಕಂಪನಿಯವರು ಅಧಿಕಾರ ನೀಡಿರುತ್ತಾರೆ. ಅದರ ಬಗ್ಗೆ ಬೋರ್ಡ್ ರಿಸೆಲ್ಯೂಷನ್‌ನ ಕಾಪಿಯನ್ನು ಹಾಜರುಪಡಿಸಿರುತ್ತೇನೆ. ಅದು ಇದೇ ಆಗಿರುತ್ತದೆ. ಅದನ್ನು ನಿಸಿ.1 ಎಂದು ಗುರುತಿಸಲಾಯಿತು.
2. ನಮ್ಮ ರಿನಾಕ್ ಕಂಪನಿಯು ಕಸ್ಟಮೈಸ್ಡ್ ಕೋಲ್ಡ್ ಸ್ಟೊರೇಜ್‌ನ ಯಂತ್ರೋಪಕರಣಗಳು ಹಾಗೂ ಅದಕ್ಕೆ ಸಂಬಂಧಪಟ್ಟಂತ ಇತರ ಬಿಡಿಭಾಗಗವನ್ನು ತಯಾರಿಸುತ್ತದೆ. ಗ್ರಾಹಕರು ಕೇಳುವ ಹಾಗೆ ನಾವು ಯಂತ್ರೋಪಕರಣಗಳನ್ನು ತಯಾರು ಮಾಡಿ ಅವರಿಗೆ ಕೊಡುತ್ತೇವೆ. ನಮ್ಮ ಕಂಪನಿಯಿಂದ ಪೆಂಟಾಗಮ್ ಸ್ಟೀಲ್ಸ್ ಇವರಿಗೆ ಕೋಲ್ಡ್ ಸ್ಟೊರೇಜ್ ಪ್ರಾಡಕ್ಟ್‌ಗಳನ್ನು ಸಪ್ಲೈ ಮಾಡಿದ್ದೆನು.

3. ನಾವು ಕೋಲ್ಡ್ ಸ್ಟೊರೇಜ್ ಸಪ್ಲೈ ಮಾಡಿದರೆ ಟ್ಯಾಕ್ಸ್ ರಿಬೇಟ್ ಸಿಗುತ್ತದೆ. ಈ ಒಟ್ಟು ಪ್ರತಿಶತ 14.5 ಟ್ಯಾಕ್ಸ್‌ನಲ್ಲಿ ನಮ್ಮಿಂದ ಖರೀದಿಸುವವರು ಕೇವಲ ಪ್ರತಿಶತ 2ರಷ್ಟು ಟ್ಯಾಕ್ಸ್ ಪೇ ಮಾಡಿದರೆ ಸಾಕು ಉಳಿದ ಪ್ರತಿಶತ 12.5ರಷ್ಟು ಟ್ಯಾಕ್ಸ್ ಎಕ್ಸ್‌ಮ್‌ಷನ್ ಆಗುತ್ತದೆ. ನಮ್ಮಿಂದ ಖರೀದಿ ಮಾಡುವವರು ಸೇಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನ ಫಾರ್ಮ್ ಸಿ ಯನ್ನು ಕೊಟ್ಟರೆ ಸಾಕು ಪ್ರತಿಶತ 12.5ರಷ್ಟು ಟ್ಯಾಕ್ಸ್ ರಿಬೇಟ್ ಆಗುತ್ತದೆ. ನಮಗೆ ಪೆಂಟಾಗಂ ಸ್ಟೀಲ್ ಇಂಡಿಯಾ ಲಿ. ರವರು ಫಾರ್ಮ್ ಸಿ ಯನ್ನು ಕೊಟ್ಟಿಲ್ಲ, ನಾವು ಅವರಿಗೆ ಫಾರ್ಮ್ ಸಿ ಯನ್ನು ಕೊಡಿ ಎಂದು ಕೇಳಿದೆವು. ಆದರೆ ಅವರು ಕೊಡಲಿಲ್ಲ. ಇದರಿಂದ ನಾವು ಪ್ರತಿಶತ 18ರಷ್ಟು ತೆರಿಗೆಯನ್ನು ಕಟ್ಟಬೇಕಾಯಿತು ಮತ್ತು ನಮ್ಮ ಕಂಪನಿಗೆ ಅವರು ನೋಟಿಸ್ ನೀಡಿ ನಮ್ಮ ಕಂಪನಿಯನ್ನು ಅವರು ಬ್ಲಾಕ್‌ಲಿಸ್ಟ್ ನಲ್ಲಿ ಇಡುತ್ತಾರೆ. ಈ ಬಗ್ಗೆ ನಮ್ಮ ಕಂಪನಿ ಮೇಲೆ ಕಾರ್ಮಷಿಯಲ್ ಟ್ಯಾಕ್ಸ್ ಇಲಾಖೆಯವರು ಕ್ರಮ ತೆಗೆದುಕೊಂಡರು ಮತ್ತು ಅವರ ಆದೇಶದ ಪ್ರಕಾರ ನಾವು ಸರ್ಕಾರಕ್ಕೆ 34ಲಕ್ಷ ರೂ. ಹಣವನ್ನು ಕಟ್ಟಬೇಕಾಯಿತು.

4. ನಾವು ಪೆಂಟಾಗಂ ಸ್ಟೀಲ್ ಕಂಪನಿಗೆ ಹೋದರೆ ಅವರು ನಮಗೆ ಅವರ ಕಚೇರಿಯ ಒಳಗಡೆ ಬಿಡಲಿಲ್ಲ ಮತ್ತು ನಮಗೆ ಅವಾಚ್ಯ ಶಬ್ದಗಳಲ್ಲಿ ಬೈದರು. ನಾವು ಪೆಂಟಾಗಂ ಸ್ಟೀಲ್ ಕಂಪನಿಗೆ ಸಪ್ಲೈ ಮಾಡಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದೇವೆ. ಪೆಂಟಾಗಂ ಸ್ಟೀಲ್ ಕಂಪನಿಯವರು ನಮಗೆ ಫಾರ್ಮ್ ಸಿ ಕೊಡದೆ ನಂಬಿಕೆ ದ್ರೋಹ ಮಾಡಿದ್ದಾರೆ. ಇದರಿಂದ ನಮ್ಮ ಕಂಪನಿಯು ಬ್ಲಾಕ್ ಲಿಸ್ಟ್‌ಗೆ ಆಗಿದೆ. ಆದ್ದರಿಂದ ನಮಗೆ ಪೆಂಟಾಗಂ ಸ್ಟೀಲ್ ಕಂಪನಿಯವರು ಸಿ ಫಾರ್ಮ್ ಕೊಡಬೇಕು ಮತ್ತು ನಾವು ಕಟ್ಟಿದ ಹಣವನ್ನು ವಾಪಸ್ ಕೊಡಬೇಕು.

**ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣಿತ ಹೇಳಿಕೆಯನ್ನು ಮುಂದೂಡಲಾಯಿತು.**

**(**ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**.** ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ**.)**

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ**,** ಬೆಂಗಳೂರು